**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಸಿ ಮಿಸ್ 157/2019**

ಪಿ ಡಬ್ಲ್ಯೂ-1

**ದಿನಾಂಕ 02-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಎಮ್ ಸಿ ಎಸ್ ಎದುರುದಾರರ ಪರ ವಕೀಲರುಃ**

ನಮ್ಮ ತಂದೆಯ ಊರು ಚಿಕ್ಕಮಳಲಿ. ನಾನು ಸಾಲೀಗ್ರಾಮದ ಮಹಾವೀರ ರಸ್ತೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದೇನೆ. ನಮ್ಮ ಬಾಡಿಗೆ ಮನೆಯ ಮಾಲೀಕರು ಲಕ್ಷ್ಮೀಗೌಡ. ಲಕ್ಷ್ಮೀಗೌಡರ ತಂದೆಯ ಹೆಸರು ಗೊತ್ತಿಲ್ಲ. ನಾನು ಯಾವುದೇ ಬಾಡಿಗೆ ಕರಾರನ್ನು ಮಾಡಿಕೊಂಡಿರುವುದಿಲ್ಲ. ಲಕ್ಷ್ಮೀಗೌಡರು ಈಗ ಮೃತ ಪಟ್ಟಿದ್ದು ನಾನು 5-6 ವರ್ಷಗಳಿಂದ ಯಾವುದೇ ಬಾಡಿಗೆಯನ್ನು ಕೊಡುತ್ತಿಲ್ಲ. ಸದರಿ ಮನೆಗೆ ವಾರಸುದಾರರು ಯಾರಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ.

2. ನಾನು ಸದರಿ ಮನೆಯಲ್ಲಿ 10 ವರ್ಷದಿಂದ ವಾಸವಾಗಿದ್ದೇನೆ. ಅಕ್ಕಪಕ್ಕದ ಮನೆಯವರು ಸಾಕ್ಷಿ ಹೇಳಲು ಬರುವುದಿಲ್ಲ. ನಾನು ಬಾಡಿಗೆ ಮನೆಯಲ್ಲಿ ಇದ್ದೇನು ಎಂದು ತಿಳಿಸಲು ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಮಾವನ ಹೆಸರು ಕೃಷ್ಣೇಗೌಡ. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಮಹಾವೀರ ರಸ್ತೆಯಲ್ಲಿ ನನ್ನ ಗಂಡನಿಗೆ ಸೇರಿದ ಮನೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಮನೆಯು ನನ್ನ ಗಂಡನ ಹೆಸರಿನಲ್ಲಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

3. ಸದರಿ ಮನೆಯು ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಮನೆಯಲ್ಲಿ ಯಾರು ವಾಸವಾಗಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದಿಂದ

ನಿಯೋಜೀಗಿಯನ್ನು ನೇಮಕ ಮಾಡಿ ಬಾಡಿಗೆ ಮನೆಯನ್ನು ಪರಿಶೀಲನೆ ಮಾಡಲು ತಕರಾರು ಇರುವುದಿಲ್ಲ. ನಾವು ವಾಸವಾಗಿರುವ ಮನೆಯು ನಮ್ಮ ಗಂಡನ ಮನೆ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿ ಇಲ್ಲ ಎಂದು ತಿಳಿಸಿರುತ್ತಾರೆ. ನಮ್ಮ ಮಾವ ಕ್ಯಾನ್ಸರ್ ಕಾಯಿಲೆಯಿಂದ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

4. ನಮ್ಮ ಮೈದುನ ಪಾರ್ಶ್ವ ವಾಯು ಕಾಯಿಲೆಯಿಂದ ಬಳುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ ಅತ್ತೆ ಜೀವಂತವಾಗಿದ್ದಾರೆ. ನಮ್ಮ ಅತ್ತೆಗೆ 70 ವರ್ಷ ಮೇಲ್ಪಟ್ಟು ವಯಸ್ಸಾಗಿದೆ. ಅವರು ಸಾಲೀಗ್ರಾಮದ ಕೋಟೇಬೀದಿಯಲ್ಲಿ ವಾಸವಾಗಿದ್ದಾರೆ. ಅವರಿಗೆ ಜೀವನ ನಡೆಸಲು ಯಾವುದೇ ಆದಾಯ ಇಲ್ಲ ಎಂದರೆ ಸರಿಯಲ್ಲ. ನಮ್ಮ ಅತ್ತೆಗೂ ಸಹ ಎದುರುದಾರರು ಮಾಸಿಕವಾಗಿ 8,000/- ಹಣವನ್ನು ನೀಡುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

5. ನನ್ನ ಮಗಳಿಗೂ ಪ್ರಸ್ತುತ 21 ವರ್ಷ ವಯಸ್ಸು. ಅವಳಿಗೆ ದುಡಿಯುವ ಶಕ್ತಿ ಇದೆ ಎಂದರೆ ಸರಿಯಲ್ಲ. ಅವಳು ಎಮ್ ಎಸ್ ಸಿ ಓದುತ್ತಿದ್ದಾಳೆ. ನನ್ನ ಮಗಳು ಪಾರ್ಟ ಟೈಮ್ ಕೆಲಸ ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ. ನನ್ನ ಮಗನನ್ನು ನನ್ನ ಗಂಡ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನನ್ನ ಮಗ ಏನು ಓದುತ್ತಿದ್ದಾನೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನಮಗ ಜೊತೆ ಮಾತನಾಡುವುದಿಲ್ಲ. ನನ್ನ ಮಗನ ಎಲ್ಲಾ ಖರ್ಚನ್ನು ಎದುರುದಾರರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

6. ಎದುರುದಾರರ ಮನೆಯಲ್ಲಿ ಎದುರುದಾರರೊಬ್ಬರೇ ಸರ್ಕಾರಿ ನೌಕರಿಯಲ್ಲಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಜಮೀನುಗಳು ಇವೆ ಎಂದು ತಿಳಿಸಿರುತ್ತಾರೆ. ಸದರಿ ಜಮೀನುಗಳ ಬಗ್ಗೆ ನನ್ನ ಬಳಿ ದಾಖಲೆ ಇರುವುದಿಲ್ಲ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಆಗುವುದಿಲ್ಲ.

7. ನಾನು ಭಾಗಾಂಶವನ್ನು ಕೋರೀ ಯಾವುದೇ ದಾವೆಯನ್ನು ಸಲ್ಲಿಸಿರುವುದಿಲ್ಲ. ಸದರಿ ದಾವೆಯಲ್ಲಿ ನನ್ನ ಮಗನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ವಜಾ ಆಗಿ ನಂತರ

ಅಪೀಲಿನಲ್ಲಿ ಮಗನನ್ನು ಪಕ್ಷಗಾರರನ್ನಾಗಿ ಸೇರಿಸುವಂತೆ ತಿಳಿಸಿದ್ದು ಸದರಿ ದಾವೆಯು ಈಗ ವಿಚಾರಣೆಯಲ್ಲಿದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಇತರ ಪಕ್ಷಗಾರರನ್ನಾಗಿ ನಮ್ಮ ಮಾವನ ಅಣ್ಣ ತಮ್ಮಂದಿರನ್ನು ಸೇರಿಸಿಲ್ಲ ಎಂದು ರಿಮಾಂಡ್ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಇನ್ನು ಬಂದಿಲ್ಲ ಎಂದು ತಿಳಿಸಿರುತ್ತಾರೆ.

8. ಜಮೀನು ಎದುರುದಾರರ ತಾತನ ಹೆಸರಿನಲ್ಲಿದ್ದು ಎದುರುದಾರರಿಗೆ 10 ಗುಂಟೆ ಜಮೀನು ಸಹ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಪದವೀದರಳು ಎಂದರೆ ಸರಿಯಲ್ಲ. ನಾನು ಹಿಂದಿ ಬಿ.ಇಡಿ ಮುಗಿಸಿ ಶಾಲೆಯಲ್ಲಿ ಪಾಠ ಮಾಡಲು ಹೋಗುತ್ತೇನೆ ಎಂದರೆ ಸರಿಯಲ್ಲ. ನನಗೆ ಕೆಲಸ ಮಾಡಲು ಯಾವುದೇ ತೊಂದರೆ ಇಲ್ಲಾ ಎಂದರೆ ಸಾಕ್ಷಿ ನನಗೆ ಆರೋಗ್ಯ ಸರಿಯಿಲ್ಲ ಎಂದು ತಿಳಿಸಿರುತ್ತಾರೆ. ಆರೋಗ್ಯ ಸರಿಯಿಲ್ಲದ ಕುರಿತು ದಾಖಲೆ ಒದಗಿಸಲು ತೊಂದರೆ ಇದೆಯಾ ಎಂದರೆ ನಾನು ಆಸ್ಪತ್ರೆಗೆ ತೋರಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

9. ನಾನು ಬೇಕಾದರೆ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುತ್ತೇನೆ. ನನ್ನ ಮಗಳಿಗೆ 21 ವರ್ಷ ವಯಸ್ಸಾಗಿದ್ದರಿಂದ ಅವಳಿಗೆ ದುಡಿಯುವ ಸಾಮರ್ಥ್ಯ ಇದೆ ಎಂದರೆ ಇನ್ನು ವ್ಯಾಸಂಗ ಮಾಡುತ್ತಿದ್ದಾಳೆ ಎಂದು ತಿಳಿಸಿರುತ್ತಾರೆ. ನನ್ನ ಮಗಳು ದುಡಿಯುವ ಸಾಮರ್ಥ್ಯ ಇದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ನಮ್ಮ ಮಾವನ ಕ್ಯಾನ್ಸರ ಕಾಯಿಲೆಯನ್ನು ಗುಣಪಡಿಸಲು 10 ಲಕ್ಷ ಹಣವನ್ನು ಸಾಲಮಾಡಿದ್ದರು ಎಂದರೆ ಸರಿಯಲ್ಲ. ನಮ್ಮ ಅತ್ತೆಯೂ ಸಹ ಕ್ಯಾನ್ಸರ್ ಕಾಯಿಲೆ ಚಿಕಿತ್ಸೆಗೆ ಎದುರುದಾರರು ಹಣವನ್ನು ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್.

10. ಅದೇ ರೀತಿ ನನ್ನ ಮೈದುನನಿಗೂ ಸಹ ಪಾರ್ಶ್ವ ವಾಯು ಕಾಯಿಲೆಗೆ ಎದುರುದಾರರು ಚಿಕಿತ್ಸೆಯನ್ನು ಕೊಡಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರ ಮನೆಯಲ್ಲಿ ಎಲ್ಲರೂ ಸಹ ಎದುರುದಾರರನ್ನು ಅವಲಂಬಿಸಿದ್ದಾರೆ ಎಂದರೆ ಸರಿಯಲ್ಲ. ಎದುರುದಾರರು ಅವರ ತಂದೆ-

ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಇದೆ ಎಂದರೆ ಸರಿಯಲ್ಲ. ಇಂದಿಗೂ ಸಹ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರ ಸಂಬಳದಲ್ಲಿ ನನ್ನ ಮಗ, ಎದುರುದಾರರ ತಂದೆ-ತಾಯಿ ಎಲ್ಲರ ಜೀವನವನ್ನು ನೋಡಿಕೊಳ್ಳಬೇಕು ಎಂದರೆ ಸರಿಯಲ್ಲ. ಎದುರುದಾರರಿಗೆ ಸಂಬಳವನ್ನು ಬಿಟ್ಟು ಬೇರೆಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿಯಲ್ಲ.

11. ಎದುರುದಾರರು ಅವರ ತಂದೆಯ ಕ್ಯಾನ್ಸರ್ ಕಾಯಿಲೆ ಚಿಕಿತ್ಸೆಗೆ ಮಾಡಿದ ಸಾಲವನ್ನು ಈಗಲೂ ಸಹ ತೀರಿಸುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗಳ ವಿದ್ಯಾಭ್ಯಾಸ ಮುಗಿದ್ದಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ 18 ವರ್ಷಗಳಾದ ಕಾರಣ ಅವಳನ್ನು ನೋಡಿಕೊಳ್ಳುವ ಬಾಧ್ಯತೆ ಇಲ್ಲ ಎಂದರೇ ಸರಿಯಲ್ಲ. ನನ್ನ ಮಗಳು ತನ್ನ ಜೀವನವನ್ನು ತಾನೇ ನಿರ್ವಹಣೆ ಮಾಡಿಕೊಳ್ಳುವ ಸಾಮರ್ಥ್ಯ ಇದೆ ಎಂದರೆ ಸರಿಯಲ್ಲ.

12. ಎದುರುದಾರರು ನನಗೂ, ಅವರ ತಂದೆತಾಯಿಗೂ ಹಣವನ್ನು ಪಾವತಿ ಮಾಡುತ್ತಿದ್ದರಿಂದ ಅವರಿಗೆ ಹೆಚ್ಚಿನ ಜೀವನಾಂಶವನ್ನು ಭರಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನನ್ನ ಮಗಳು 2018 ನೇ ಇಸವಿಯಲ್ಲಿ ಮೊದಲ ವರ್ಷದ ಬಿ ಎಸ್ ಸಿ ವ್ಯಾಸಂಗ ಮಾಡುತ್ತಿದ್ದಳು ಎಂದರೆ ಸರಿ. ನನ್ನ ಮಗಳು ಜೆ ಎಸ್ ಎಸ್ ಮೈಸೂರಿನಲ್ಲಿ ಎಮ್. ಎಸ್. ಸಿ ಅಂತಿಮ ವರ್ಷದ ಪರೀಕ್ಷೆಯನ್ನು ಬರೆದಿದ್ದಾಳೆ.

13. ನನ್ನ ಮಗಳು ವಿದ್ಯಾಭ್ಯಾಸಕ್ಕೆ 10-15 ಸಾವಿರ ಮಾತ್ರ ರಸೀದಿಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. 2019 ನೇ ಇಸವಿಯಲ್ಲಿ 15 ಸಾವಿರಕ್ಕಿಂತ ಹೆಚ್ಚು ಖರ್ಚನ್ನು ಭರಿಸಿಲ್ಲ ಎಂದರೆ ಸರಿಯ್ಲ್ಲ, ಸಾಕ್ಷಿ ಮುಂದುವರೆದು ವಾರ್ಷಿಕವಾಗಿ 1 ಲಕ್ಷ ಖರ್ಚಾಗುತ್ತದೆ ಎಂದು ತಿಳಿಸಿರುತ್ತಾರೆ. ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಸರ್ಕಾರಿ ಕಾಲೇಜು ಎಂದರೆ ಸರಿ. ಪ್ರತಿವರ್ಷ ಯಾವುದೇ ವಂತಿಗೆಯನ್ನು ಕಾಲೇಜಿನವರು ತೆಗೆದುಕೊಳ್ಳುವುದಿಲ್ಲ ಎಂದರೆ ಸರಿಯಲ್ಲ.

14. ಕೇವಲ ಭೋದನಾ ಶುಲ್ಕವನ್ನು ಮಾತ್ರ ತೆಗೆದುಕೊಳ್ಳುತಾರೆ ಎಂದರೆ ಸರಿಯಲ್ಲ. ಸರ್ಕಾರಿ ಕಾಲೇಜಾದ ಕಾರಣ ಯಾವುದೇ ಹೆಚ್ಚಿನ ಶುಲ್ಕ ಇಲ್ಲದೆ ಇದ್ದರೂ ಸಹ ವಾರ್ಷಿಕವಾಗಿ 1 ಲಕ್ಷ ಖರ್ಚಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಮುಂದಿನ ವರ್ಷದಿಂದ ಕೆಲಸಕ್ಕೆ ಹೋಗಬಹುದು ಎಂದರೆ ಸಾಕ್ಷಿ ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿಸುವುದಾಗಿ ತಿಳಿಸಿರುತ್ತಾರೆ.

15. ಎದುರುದಾರರು ಐಶಾರಾಮಿ ಜೀವನಕ್ಕೆ ಸಾಕಾಗುವಷ್ಟು ಹಣವನ್ನುಭರಿಸಲು ಸಾಧ್ಯವಿಲ್ಲ ಎಂದರೆ ಸಾಕ್ಷಿ ನಾವು ಯಾವುದೇ ಐಶಾರಾಮಿ ಜೀವನವನ್ನು ಮಾಡುತ್ತಿಲ್ಲ ಎಂದು ತಿಳಿಸಿರುತ್ತಾರೆ. ಎಲ್ಲಾ ಕಡಿತವಾಗಿ ಅವರ ಕೈಗೆ ಸಂಬಳವಾಗಿ 45 ಸಾವಿರ ಮಾತ್ರ ತೆಗೆದುಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನಾನು ಕೇಳಿದ ಹೆಚ್ಚಿನ ಜೀವನಾಂಶವನ್ನು ಭರಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಎದುರುದಾರರ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ